**ಸಾಕ್ಷಿಯನ್ನು ದಿನಾಂಕಃ 18-02-2026 ರಂದು ಪುನಃ ಕರೆದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಎ.ಜಿ.ಪಿ ರವರಿಂದ.**

ವಾದಿ ನನ್ನ ಮಗನಾಗಬೇಕು. ವಾದಿಯ ಜನ್ಮ ದಿನಾಂಕ ಅವನ ಶಾಲಾ ದಾಖಲಾತಿಯಲ್ಲಿ ಅವನ ಜನ್ಮ ದಿನಾಂಕ ತಪ್ಪಾಗಿ 03.06.2009 ಎಂದು ನಮೂದು ಆಗಿದ್ದು, ಆದ್ದರಿಂದ ಅವನ ನಿಜವಾದ ಜನ್ಮ ದಿನಾಂಕ 08.03.2010 ಎಂದು ಅವನ ಶಾಲಾ ದಾಖಲಾತಿಯಲ್ಲಿ ತಿದ್ದುಪಡಿ ಮಾಡುವ ಸಲುವಾಗಿ ದಾವೆ ಹಾಕಿರುತ್ತೇನೆ. ವಾದಿ ಈಗ ಪ್ರಥಮ ವರ್ಷದ ಪಿ.ಯು.ಸಿ ಯಲ್ಲಿ ಓದುತ್ತಿದ್ದಾನೆ. ವಾದಿ 1 ನೇ ತರಗತಿಯನ್ನು ಪ್ರತಿವಾದಿ ನಂ.7 ರವರ ಶಾಲೆಯಲ್ಲಿ ಕಲಿತಿರುತ್ತಾನೆ. ಅದೇ ರೀತಿ 8 ನೇ ತರಗತಿಯಿಂದ 10 ನೇ ತರಗತಿಯವರೆಗೆ ಪ್ರತಿವಾದಿ ನಂ.10 ರವರ ಶಾಲೆಯಲ್ಲಿ ಕಲಿತಿರುತ್ತಾನೆ. ವಾದಿಯ ಜನ್ಮ ದಿನಾಂಕ ತಪ್ಪಾಗಿ ಅವನ ಶಾಲಾ ದಾಖಲಾತಿಗಳಲ್ಲಿ ದಾಖಲಾಗಿರುವುದು ಅವನು 10 ನೇ ತರಗತಿ ಓದುತ್ತಿರುವಾಗ ನಮಗೆ ಗೊತ್ತಾಗಿರುತ್ತದೆ. ವಾದಿಯನ್ನು 1 ನೇ ತರಗತಿಗೆ ದಾಖಲ ಮಾಡುವ ಸಮಯದಲ್ಲಿ ನಾನು ವಾದಿಯ ಜನ್ಮ ದಿನಾಂಕವನ್ನು 03.06.2009 ಎಂದು ದಾಖಲ ಮಾಡಿಕೊಳ್ಳಲು ಹೇಳಿದ ಮೇರೆಗೆ ಸಂಬಂಧಪಟ್ಟ ಶಾಲೆಯವರು ಅದೇ ರೀತಿ ದಾಖಲ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನಾನು ವಾದಿಯ ಜನ್ಮ ದಿನಾಂಕವನ್ನು 08.03.2010 ಎಂದು ಹೇಳಿದ್ದರೂ ಸಹಿತ ಸಂಬಂಧಪಟ್ಟ ಶಾಲೆಯವರು ಅದನ್ನು ತಪ್ಪಾಗಿ ಈ ಮೇಲಿನ ರೀತಿ ದಾಖಲಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯ ಜನ್ಮ ದಿನಾಂಕ 08.03.2010 ಎಂದು ಇರುತ್ತದೆ ಎಂದು ತೋರಿಸಲು ನಾನು ಅವನ ಜನ್ಮ ಪ್ರಮಾಣ ಪತ್ರವನ್ನು ಹಾಜರ ಮಾಡಿರುತ್ತೇನೆ. ವಾದಿಯ ಎಲ್ಲ ಶಾಲಾ ದಾಖಲಾತಿಗಳಲ್ಲಿ ಅವನ ಜನ್ಮ ದಿನಾಂಕ 03.06.2009 ಎಂದು ದಾಖಲ ಇರುತ್ತದೆ ಎಂದರೆ ಸರಿ. ನಾನು 1 ನೇ ತರಗತಿಗೆ ವಾದಿಯನ್ನು ದಾಖಲ ಮಾಡುವಾಗ ಅವನ ಜನ್ಮ ದಿನಾಂಕ 03.06.2009 ಎಂದು ಹೇಳಿದ ಮೇರೆಗೆ ಸಂಬಂದಪಟ್ಟ ಶಾಲೆಯವರು ಅದೇ ರೀತಿ ದಾಖಲಿಸಿಕೊಂಡಿರುತ್ತಾರೆ, ಆದರೂ ಸಹಿತ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ವಾದಿಯ ಜನ್ಮ ದಿನಾಂಕ 08.03.2010 ಇರುತ್ತದೆ ಎಂದು ಸುಳ್ಳು ದಾವೆ ಮತ್ತು ಸಾಕ್ಷ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ ಮುಧೋಳ.

**ಸಾಕ್ಷಿಯ ಸಹಿಃ**

LAGAMA SHIVANAPPA HUKKERI
Digitally signed by LAGAMA SHIVANAPPA HUKKERI
Date: 2026.03.11 11:00:22 +0530